

# ‘ಬಘೀರ’ ಹ್ಯಾಂಗೋವರ್

ಈಚೆಗಷ್ಟೆ ಬಹುನಿರೀಕ್ಷಿತ ‘ಬಘೀರ’ ಸಿನಿಮಾ ಚಿತ್ರೀಕರಣ ಪೂರ್ಣಗೊಂಡಿದ್ದು, ಈ ವರ್ಷಾಂತ್ಯಕ್ಕೆ ಬಿಡುಗಡೆಗೊಳ್ಳಲು ತಯಾರಿ ನಡೆಯುತ್ತಿದೆ.

ನಟ ಶ್ರೀಮುರಳಿ, ಸಿನಿಮಾ ಚಿತ್ರೀಕರಣ ಸಂದರ್ಭದಲ್ಲಿ ಗಾಯಗೊಂಡಿದ್ದ ಕಾರಣಕ್ಕೆ ಸಿನಿಮಾ ಕೆಲಸಗಳು ನಿಧಾನಗತಿಯಲ್ಲಿ ಸಾಗಿದ್ದು, ‘ಸಿನಿಮಾ ಮುಗಿದದ್ದು ಒಂದು ದೊಡ್ಡ ಮಿಷನ್ ಪೂರ್ಣಗೊಂಡಂತೆ ಆಗಿದೆ’ ಎಂದು ನಿರ್ದೇಶಕ ಸೂರಿ ನಿರಾಳರಾಗಿದ್ದಾರೆ.

ಆದರೆ ನಟ ಶ್ರೀಮುರಳಿ ಮಾತ್ರ ಇನ್ನೂ ‘ಬಘೀರ’ ಹ್ಯಾಂಗೋವರ್‌ನಲ್ಲೇ ಇರುವುದಾಗಿ ಹೇಳಿಕೊಂಡಿದ್ದಾರೆ. ‘ಬಘೀರ’ದಲ್ಲಿ ಮತ್ತೆ ಖಾಕಿ ತೊಟ್ಟಿರುವ ಶ್ರೀಮುರಳಿ, ತಮ್ಮ ಚಿತ್ರೀಕರಣದ ಅನುಭವಗಳನ್ನು ಹಂಚಿಕೊಂಡಿದ್ದಾರೆ.

“ಚಿತ್ರೀಕರಣದ ಸಮಯದಲ್ಲಿ ಆದ ಗಾಯಗಳ ಪ್ರಮಾಣ ನನಗೆ ನೆನಪಿಲ್ಲ. ಸಿನಿಮಾ ಸ್ಥಳ, ಶೆಡ್ಯೂಲ್, ಆ್ಯಕ್ಷನ್ ಸೀಕ್ವೆನ್ಸ್ ಇವುಗಳಲ್ಲೇ ನಾನು ಕಳೆದುಹೋಗಿದ್ದೆ. ಚಿತ್ರೀಕರಣವೆಲ್ಲ ಮುಗಿದ ಮೇಲೆ ಒಂದು ಫ್ಯಾಂಟಸಿ ಲೋಕದಿಂದ ಹೊರಬಂದಂತೆ ಅನಿಸುತ್ತಿದೆ. ‘ಬಘೀರ’ ಹ್ಯಾಂಗೋವರ್‌ನಲ್ಲಿಯೇ ಇದ್ದೇನೆ. ನನಗೆ ಸಮಯದ ಟ್ರ್ಯಾಕ್ ಸಿಗುತ್ತಿಲ್ಲ. ಸಿನಿಮಾ ಕೆಲಸಗಳೆಲ್ಲ ಮುಗಿದ ಮೇಲೂ, ನಾಳೆ ಯಾವ ದೃಶ್ಯದ ಚಿತ್ರೀಕರಣವಿದೆ ಎಂದೇ ಯೋಚಿಸುತ್ತಿದ್ದೇನೆ” ಎಂದು ನಗುತ್ತಾರೆ.

‘ನನ್ನ ಎರಡರಿಂದ ಮೂರು ವರ್ಷ ಈ ಸಿನಿಮಾಗಾಗಿಯೇ ಮುಡಿಪಿಟ್ಟಿದ್ದೇನೆ. ಒಳ್ಳೆಯ ಕಾರಣಕ್ಕೆ ನನ್ನ ಸಮಯ ಕೊಟ್ಟಿರುವ ತೃಪ್ತಿ ನನಗಿದೆ’ ಎಂದು ಖುಷಿಯಿಂದ ಹೇಳಿಕೊಂಡಿದ್ದಾರೆ.

‘ಬಘೀರ’ ಮುಗಿಯುತ್ತಿದ್ದಂತೆ, ಶಾರ್ಟ್ ಬ್ರೇಕ್ ತೆಗೆದುಕೊಂಡು ತಮ್ಮ ಮುಂದಿನ ಸಿನಿಮಾ ‘ಪಾರಕ್’ಗೆ ಸಿದ್ಧತೆ ನಡೆಸಲಿದ್ದಾರೆ. ಮತ್ತೆ ಬೇರೆ ಬೇರೆ ಸ್ಕ್ರಿಪ್ಟ್‌ಗಳನ್ನು ತೆಗೆದುಕೊಳ್ಳುವುದಾಗಿ ತಿಳಿಸಿದ್ದಾರೆ.

ಕೆಜಿಎಫ್ ಸಿನಿಮಾ ಖ್ಯಾತಿಯ ಪ್ರಶಾಂತ್ ನೀಲ್ ಈ ಚಿತ್ರಕಥೆ ಸಿದ್ಧಪಡಿಸಿದ್ದು, ಡೈಲಾಗ್ ಹಾಗೂ ಸ್ಕ್ರೀನ್ ಪ್ಲೇ ಸೂರಿ ಅವರದ್ದು. ವಿಜಯ ಕಿರಗಂದೂರು ಅವರ ಹೊಂಬಾಳೆ ಫಿಲ್ಮ್ ಬ್ಯಾನರ್ ಅಡಿಯಲ್ಲಿ ಸಿನಿಮಾ ನಿರ್ಮಾಣಗೊಳ್ಳುತ್ತಿದೆ. ಈ ಆ್ಯಕ್ಷನ್ ಸಸ್ಪೆನ್ಸ್ ಡ್ರಾಮಾ ಸಿನಿಮಾ, ಬೇರೆ ಭಾಷೆಗಳಲ್ಲೂ ಬರುತ್ತಿದ್ದು, ಇದೇ ವರ್ಷಾಂತ್ಯಕ್ಕೆ ಬಿಡುಗಡೆಗೊಳ್ಳುವ ನಿರೀಕ್ಷೆಯಿದೆ. ಶ್ರೀಮುರಳಿ ಜೊತೆ ರುಕ್ಮಿಣಿ ವಸಂತ್ ನಟಿಸುತ್ತಿದ್ದಾರೆ. ■



‘ಕನ್ನಡ ಸಿನಿಮಾರಂಗ ನನಗೆ ಅವಕಾಶ ನೀಡಿದ್ದು. ಇದೇ ನನ್ನ ಮನೆ. ಕನ್ನಡದಲ್ಲಿ ಒಳ್ಳೊಳ್ಳೆಯ ಸಿನಿಮಾಗಳನ್ನು ಮಾಡಬೇಕೆಂಬ ಆಸೆಯಿದೆ’

# ಚೌಕಟ್ಟುಗಳಾಚೆ ರುಕ್ಮಿಣಿ

‘ಸಪ್ತ ಸಾಗರದಾಚೆ ಎಲ್ಲೋ’ ಸಿನಿಮಾ ನಂತರ ಜನಪ್ರಿಯತೆಯ ಗರಿ ಹೆಚ್ಚಿಸಿಕೊಂಡಿರುವ ನಟಿ ರುಕ್ಮಿಣಿ ವಸಂತ್ ಸಿನಿಹಾದಿ ಮತ್ತಷ್ಟು ವಿಸ್ತಾರಗೊಂಡಿದೆ. ಕನ್ನಡದಲ್ಲಿ ಮಾತ್ರವಲ್ಲ, ತೆಲುಗು, ತಮಿಳು ಸಿನಿಮಾರಂಗದಿಂದಲೂ ಅತ್ಯುತ್ತಮ ಪ್ರಾಜೆಕ್ಟ್‌ಗಳು ಅವರನ್ನು ಅರಸಿ ಬರುತ್ತಿವೆ.

ಈ ಬೆಳವಣಿಗೆಯ ಹಿನ್ನೆಲೆಯಲ್ಲಿ ಖುಷಿಯಾಗಿರುವ ರುಕ್ಮಿಣಿ, ದಕ್ಷಿಣ ಭಾರತ ಸಿನಿಮಾಗಳ ಬಗ್ಗೆ ಅಭಿಮಾನದ ಮಾತುಗಳನ್ನು ಆಡಿದ್ದಾರೆ.

‘ಹಿಂದೆಂದಿಗಿಂತಲೂ ಗಟ್ಟಿಯಾಗಿ, ದಕ್ಷಿಣ ಭಾರತದ ಸಿನಿಮಾರಂಗ ತನ್ನ ಅಸ್ತಿತ್ವವನ್ನು ರಾಷ್ಟ್ರಮಟ್ಟದಲ್ಲಿ ಪ್ರಕಟಪಡಿಸುತ್ತಿದೆ. ಮಲೆಯಾಳಂ ಚಿತ್ರರಂಗ ಒಳಗೊಂಡಂತೆ ‘ಕೆಜಿಎಫ್’, ‘ಕಾಂತಾರ’ ಹಾಗೂ ‘ಪುಷ್ಪ’ದಂಥ ದಕ್ಷಿಣ ಭಾರತದ ಸಿನಿಮಾಗಳು ವಿಶೇಷವಾಗಿ ಗಮನಸೆಳೆಯುತ್ತಿವೆ. ಬಾಲಿವುಡ್‌ನವರು ಇತ್ತ ನೋಡುವಂತೆ ಮಾಡಿವೆ’ ಎಂದಿದ್ದಾರೆ.

‘ಭಾರತೀಯ ಚಿತ್ರರಂಗದಲ್ಲಿ ದಕ್ಷಿಣ ಭಾರತದ ಸಿನಿಮಾರಂಗ ಒಂದು ಸ್ಥಾನ ಗಿಟ್ಟಿಸಿಕೊಂಡಿದೆ. ದೇಶಾದ್ಯಂತ ಪ್ರೇಕ್ಷಕರು ವೈವಿಧ್ಯಮಯ ಕಥೆಗಳನ್ನು, ಸಂಸ್ಕೃತಿಗಳನ್ನು ಸಿನಿಮಾ ಮೂಲಕ ಕಂಡುಕೊಳ್ಳುತ್ತಿರುವುದು ಎಕ್ಸೈಟಿಂಗ್ ವಿಷಯ. ಇದೊಂದು ಆರೋಗ್ಯಕರ ಬೆಳವಣಿಗೆ’ ಎಂದು ಸಂತೋಷದಿಂದ ಅಭಿಪ್ರಾಯ ಹಂಚಿಕೊಂಡಿದ್ದಾರೆ.

ಇದೇ ಸಂದರ್ಭದಲ್ಲಿ ಕನ್ನಡ ಸಿನಿಮಾರಂಗದ ಬಗ್ಗೆ ಮೆಚ್ಚುಗೆಯ ಮಾತುಗಳನ್ನಾಡುತ್ತಾ, “ಕನ್ನಡ ಸಿನಿಮಾರಂಗ ನನಗೆ ಅವಕಾಶ ನೀಡಿದ್ದು. ಇದೇ ನನ್ನ ಮನೆ. ಬೇರೆ ಭಾಷೆಗಳ ಸಿನಿಮಾಗಳನ್ನು ಮಾಡುತ್ತಿದ್ದರೂ, ಬೇರೆ ಬೇರೆ ಭಾಷೆಗಳನ್ನು ಕಲಿಯುತ್ತಿದ್ದರೂ ಶೂಟಿಂಗ್‌ಗೆಂದು ಬೇರೆಡೆಗೆ ಹೋದಾಗ ‘ಹೋಮ್ ಸಿಕ್’ ಆಗುತ್ತೇನೆ. ಕನ್ನಡದಲ್ಲಿ ಒಳ್ಳೊಳ್ಳೆಯ ಸಿನಿಮಾಗಳನ್ನು ಮಾಡಬೇಕೆಂಬ ಆಸೆಯಿದೆ. ಸದ್ಯ ‘ಬಘೀರ’, ‘ಭೈರತಿ ರಣಗಲ್’ನಲ್ಲಿ ಕಾಣಿಸಿಕೊಳ್ಳುತ್ತಿದ್ದೇನೆ” ಎಂದಿದ್ದಾರೆ. ■